ಶ್ರೀ ಪುಟ್ಟಸ್ವಾಮಿಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 1993-94ನೇ ಸಾಲಿನಲ್ಲಿ ಸೂರಲಬ್ಬಿಯಲ್ಲಿ ಸರ್ಕಾರಿ ಪ್ರೌಢ ಶಾಲೆಯನ್ನು ಪ್ರಾರಂಭಿಸಲಾಗಿರುತ್ತದೆ.

ಆ) ಪ್ರೌಢಶಾಲೆಗೆ ಅವಶ್ಯವಾದ ಕಟ್ಟಡ ಕಟ್ಟಲು ನಿವೇಶನದ ವಿವಾದವಿಲ್ಲದ್ದರಿಂದ ಇತ್ಯರ್ಥಗೊಂಡಿರುವುದಿಲ್ಲ.

ಇ) ಈಗಾಗಲೇ ಸೂರಲಬ್ಬಿ ಗ್ರಾಮದಲ್ಲಿ ಪ್ರೌಢ ಶಾಲೆಯು ಪ್ರಾರಂಭಿಸಿದ್ದು ಶಾಲೆಯು ತಾತ್ಕಾಲಿಕವಾಗಿ ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ನಡೆಯುತ್ತಿದೆ.

ಈ) ಪ್ರೌಢ ಶಾಲೆಯು ಸೂರಲಬ್ಬಿ ಗ್ರಾಮದಲ್ಲಿಯೇ ತಾತ್ಕಾಲಿಕವಾಗಿ ಪ್ರಾಥಮಿಕ ಶಾಲಾ ಕಟ್ಟಡದಲ್ಲಿಯೇ ನಡೆಯುತ್ತಿದೆ. ಆದರೆ ಪ್ರೌಢಶಾಲೆಗೆ ಶಾಶ್ವತ ಕಟ್ಟಡ ಕಟ್ಟಲು ನಿವೇಶನ ಇರುವುದಿಲ್ಲ. ಸುತ್ತಮುತ್ತಲ ಗ್ರಾಮಸ್ಥರು ಸೂರಲಬ್ಬಿ ಗ್ರಾಮದಿಂದ ದೂರದ ಕುಗ್ರಾಮಗಳಿಗೆ ಗ್ರಾಮದಲ್ಲಿ ಕಟ್ಟಬೇಕೆಂದು, ಇನ್ನೂ ಕೆಲವರು ಪ್ರಾಥಮಿಕ ಶಾಲಾ ಪಕ್ಕದಲ್ಲಿ ಕಟ್ಟಡವೇಕೆಂದು ಸಾರ್ವಜನಿಕರಲ್ಲಿ ಭಿನ್ನಾಭಿಪ್ರಾಯವಿದೆ.

ಉ) ಈಗಾಗಲೇ ಪ್ರೌಢಶಾಲೆ ಪ್ರಾರಂಭವಾಗಿ ತರಗತಿಗಳು ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ನಡೆಯುತ್ತಿವೆ.

ಊ) ಪ್ರೌಢ ಶಾಲಾ ನಿರ್ಮಿಸುವ ಕಟ್ಟಡದ ಜಮೀನಿನ ಬಗ್ಗೆ ವಿವಾದವಿದ್ದು, ಸಾರ್ವಜನಿಕರಲ್ಲಿ ಭಿನ್ನಾಭಿಪ್ರಾಯವಿದೆ. 1993ರಿಂದ ಸದರಿ ಶಾಲೆಗೆ ಕಟ್ಟಡ ನಿರ್ಮಾಣ ಮಾಡಲು ಯೋಜನಾ ಕಾರ್ಯಕ್ರಮದಡಿಯಲ್ಲಿ ಸಾಕಷ್ಟು ಅನುದಾನ ಕಾಯ್ದಿರಿಸಿದ್ದು, ವಿವಾದದಿಂದ ಕೆಲಸ ಪ್ರಾರಂಭಗೊಂಡಿರುವುದಿಲ್ಲ.

ಉತ್ತರ ಕೊಡಗು ಜಿಲ್ಲೆಯ ಹೆಬ್ಬಾಲೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭ

740 - ಶ್ರೀ ಎಂ. ಪಿ. ಅಪ್ಪಚ್ಚುರಂಜನ್ (ಸೋಮವಾರ ಪೇಟೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕೊಡಗು ಹೆಬ್ಬಾಲೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದಕ್ಕೆ ಸಂಬಂಧಪಟ್ಟಂತೆ ಸ್ಥಳೀಯ ಸ್ಥಾಯಿ ಸಮಿತಿ ರಚಿಸಿರುವುದು ನಿಜವೇ;

ಇ) ಹಾಗಿದ್ದಲ್ಲಿ ಇದಕ್ಕೆ ಸರ್ಕಾರದಿಂದ ಮಂಜೂರಾತಿ ದೊರೆತಿದೆಯೇ,

ಈ) ಹಾಗಿಲ್ಲದಿದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಗುವುದು ?

ಶ್ರೀ ವಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು. 1994-95ನೇ ಸಾಲಿನಲ್ಲಿ.

ಇ) ಇಲ್ಲ.

ಈ) ಪ್ರಶ್ನೆಯಿಲ್ಲ.

ಮಂಗಳೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ಕಾಲೇಜುಗಳ

742 - ಶ್ರೀ ಕ. ಜಯರಾಮ ಶೆಟ್ಟಿ (ಬುಳ್ಳಾಲ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ವಿಶ್ವ ವಿದ್ಯಾಲಯದ ಅಧೀನದಲ್ಲಿ ಬರುವ ವಿವಿಧ ಕಾಲೇಜುಗಳ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು, (ವಿವರ ನೀಡುವುದು)

ಆ) ವಿಶ್ವವಿದ್ಯಾಲಯಗಳ ಅನುದಾನ ಆಯೋಗ ನೀಡಿರುವ ಮಾರ್ಗದರ್ಶಿ ಸೂತ್ರದಂತೆ ಈ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರು, ಪ್ರವಚನಕಾರರ ಉಪನ್ಯಾಸಕಾರರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆಯೇ; (ಇದ್ದರೆ ಮಾರ್ಗದರ್ಶಿ ಸೂತ್ರವೇನು ಹಾಗೂ ನೇಮಕಾತಿಗಳ ವಿವರ ನೀಡುವುದು)

ಇ) ಈ ವಿಶ್ವವಿದ್ಯಾಲಯದಲ್ಲಿ ಸ್ಥಾಪಿತವಾಗಿರುವ ಪ್ರತಿಷ್ಠಿತ ಶಿವರಾಮ್ ಕಾರಂತ್ ಪೀಠದಲ್ಲಿ ಕಾರ್ಯಕ್ರಮಗಳು ನಡೆಯುವಂತಾಗಲು ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಿದೆ ಹಾಗೂ ಈ ಪೀಠದಲ್ಲಿ ಇದುವರೆಗೆ ಏನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ?

ಈ) ದಕ್ಷಿಣ ಕನ್ನಡ ಜಿಲ್ಲೆಯ ವೈಶಿಷ್ಟ್ಯಪಾದ ಕಲೆ, ಯಕ್ಷಗಾನ, ಭೂತರಾಧನೆ, ಕಂಬಳ ಇತ್ಯಾದಿಗಳ ಯಕ್ಷಗಾನ ಪೀಠವನ್ನು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ)	**ಕಾಲೇಜುಗಳ ವಿವರ**	**ಸಂಖ್ಯೆ**
1)	ಕಲೆ ವಾಣಿಜ್ಯ ವಿಜ್ಞಾನ ಬಿಬಿಎಂ ಬಿಎಸ್‌ಡಬ್ಲ್ಯೂ ಪದವಿ ಕಾಲೇಜುಗಳು	67
2)	ಶಿಕ್ಷಣ ಕಾಲೇಜುಗಳು	4
3)	ಇಂಜಿನಿಯರಿಂಗ್ ಕಾಲೇಜುಗಳು	4
4)	ಕಾನೂನು ಕಾಲೇಜುಗಳು	5
5)	ಹೋಟೆಲ್ ಮ್ಯಾನೇಜ್‌ಮೆಂಟ್	